ಹೇಳುವುದೆಂದರೆ, ಆ ಕೊಂಡದ ಬೆಂಕಿ ನನ್ನ ಎದೆಯ ಸಂಕಟವನ್ನು ಸುಡಲಾರದು. ಅದರಿಂದ ಇನ್ನೊಂದು ಮರಕಡಿಸಿ ಸೌದೆ ತರಿಸು ಎಂದೇ ಹೇಳುತ್ತಾಳೆ. ಅಷ್ಟೇ ಅಲ್ಲ ಬೆಂಕಿಗೆ ಹೋಗಬೇಕಾದುದಕ್ಕೆ ಯಾವ ಭಯವೂ ಇಲ್ಲ, ಬದಲಾಗಿ ಸಂತೋಷವೇ. ಅದರಿಂದ ಮದುಮಗಳಿಗೆ ಮಾಡುವ ಅಲಂಕಾರವೇ ತನಗೂ ಆಗಬೇಕು, ಗಂಡನನ್ನು ಕೂಡಲು ಹೋಗುತ್ತಿರುವೆನಲ್ಲ ಎಂದಳಂತೆ.

ಸಿರಿಯಜ್ಜಿ ಕೊಂಡದ ಕಾಟವ್ವನ ಪದವನ್ನು ಹಾಡುತ್ತಲೇ ತತ್ಸಂಬಂಧದ ವಿವರಗಳನ್ನು ನನಗೆ ಕೊಟ್ಟಳು. ಇಷ್ಟೆಲ್ಲ ಕೇಳುವಲ್ಲಿ ಹೊತ್ತುಮುಳುಗಿ ಕತ್ತಲು ಏರುತ್ತ ಹೋಯಿತು. ನಾನು ಸಿರಿಯಜ್ಜಿಯ ನೆಲೆಬಿಟ್ಟು ಯಲಗಟ್ಟೆ ಗ್ರಾಮ ದಾಟಿ, ಆ ಮುಂದಿನ ಒಂದೆರಡು ಕಿಲೊಮೀಟರು ನಡೆದು ಬಸ್ಸಿನ ರಸ್ತೆಗೆ ಬಂದೆ. ಬೆಳಗೆರೆಯ ಬಸ್‌ಸ್ಟ್ಯಾಂಡು ಮುಟ್ಟಿದೆ. ಹಿರಿಯೂರಿನ ಕಡೆಯಿಂದ ರಾತ್ರಿ ಎಂಟು, ಒಂಬತ್ತರ ನಡುವೆ ಅದೊಂದು ಬಸ್ಸು ಬರಬೇಕಿತ್ತಲ್ಲ. ಬೆಳಗೆರೆ ಬಸ್‌ಸ್ಟ್ಯಾಂಡಿನ ಕಟ್ಟೆಯ ಮೇಲೆ ಕೂತೆ. ಆ ಕಟ್ಟೆಗೊಂದು ಮರ. ಎಷ್ಟುಹೊತ್ತು ಕಾಯ್ದರೂ ಬಸ್ಸಿನ ಮುಂಭಾಗದ ಲೈಟು ಕಾಣಲೇ ಇಲ್ಲ. ರಾತ್ರಿ ಒಂಬತ್ತು, ಹತ್ತರ ನಡುವಣ ಸಮಯವಾಗಿದ್ದುದರಿಂದ ದಿನದ ದುಡಿಮೆಯ ಜನ ತಂತಮ್ಮ ಹಟ್ಟಿಯಲ್ಲಿ ಒಂದನೆಯ ನಿದ್ದೆ ಮುಗಿಸಿ ಎರಡನೆಯ ಮಗ್ಗಲಾಗಿದ್ದರು.

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಎಮಿರಿಟಸ್ ಪ್ರಾಧ್ಯಾಪಕರಾಗಿದ್ದಾರೆ. ಹನೂರರು 40ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿ ಓದುಗರ ಮೇರೆಯಿಲ್ಲದ ಮೆಚ್ಚುಗೆ ಪಡೆದಿದೆ. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ' ಮತ್ತು 'ಕಳೆದ ಮಂಗಳವಾರ ಮುಸ್ಸಂಜೆ' ಅವರ ಕಥಾಸಂಕಲನಗಳು. 'ಬಾರೋ ಗೀಜಗನೆ', 'ನಿಕ್ಷೇಪ' ಅವರ ಇನ್ನೆರಡು ಕಾದಂಬರಿಗಳು. ಜಾನಪದಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳನ್ನು ಅವರು ಸಂಪಾದಿಸಿದ್ದಾರೆ. 'ಎನ್‌ಸೈಕ್ಲೋಪಿಡಿಯಾ ಆಫ್ ಫೋಕ್‌ಕಲ್ಚರ್ ಆಫ್ ಕರ್ನಾಟಕ' ಈ ವಿಶ್ವಕೋಶ ಕನ್ನಡ ಜಾನಪದವನ್ನು ಇಂಗ್ಲಿಷ್‌ನಲ್ಲಿ ಪರಿಚಯಿಸುತ್ತದೆ. ಇದನ್ನು ಹನೂರು ಚೆನ್ನೈನಲ್ಲಿ ನಾಲ್ಕು ವರ್ಷ ಇದ್ದು ಸಂಪಾದಿಸಿದ್ದಾರೆ.